## Andolana

Date: 03-04-2021 Page No: 2 (II)

Edition: Mysore Language: Kannada

# 'ಬದಲಾವಣೆಯತ್ತ ಭಾರತ ದಾಪುಗಾಲು'

## ಎಸ್‌ಡಿಎಂಐಎಂಡಿಯ 26ನೇ ಘಟಿಕೋತ್ಸವದಲ್ಲಿ ಪರಶುರಾಮನ್

ಮೈಸೂರು: ಭಾರತ ಬದಲಾವಣೆಯ ಹಾದಿಯಲ್ಲಿ ದಾಪುಗಾಲಿಡುತ್ತಿದೆ. ಅತಿ ಹೆಚ್ಚು ಯುವ ಜನತೆಯನ್ನು ಹೊಂದಿರುವ ದೇಶ ಎಂಬ ಹೆಗ್ಗಳಿಕೆಗೆ ಪಾತ್ರ ವಾಗಿರುವ ನಮ್ಮ ದೇಶ ಇನ್ನು 10 ವರ್ಷಗಳಲ್ಲಿ ಉತ್ಪಾದನಾ ವಲಯದಲ್ಲಿ ಪ್ರಪಂಚವನ್ನು ಆಳುತ್ತದೆ ಎಂದು ಟೊಯೊಟಾ ಇಂಡಸ್ಟ್ರೀಸ್ ಇಂಜಿನ್ ಇಂಡಿಯಾ ಕಂಪನಿಯ ಉಪ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್.ಪರಶುರಾಮನ್ ಹೇಳಿದರು.

ಸಿದ್ಧಾರ್ಥನಗರದಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ನಮ್ಮ ದೇಶದಲ್ಲಿರುವಷ್ಟು ಯುವಜನತೆ ಬೇರೆ ಯಾವ ದೇಶದಲ್ಲೂ ಇಲ್ಲ. ಚೀನಾ, ಜಪಾನ್ ನಂತಹ ಮುಂದುವರಿದ ದೇಶಗಳಲ್ಲಿ ಮಧ್ಯ ವಯಸ್ಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇದರ ಪರಿಣಾಮವಾಗಿ ಪ್ರಸ್ತುತ ಜಗತ್ತಿನ ಉತ್ಪಾದನಾ ವಲಯವನ್ನು ಆಳುತ್ತಿರುವ ಚೀನಾ ಸೇವಾ ವಲಯ ಪ್ರವೇಶಿಸಿ, ಸೇವಾ ವಲ ಯದಲ್ಲಿ ಮುಂದಿರುವ ಭಾರತ ಉತ್ಪಾದನಾ ವಲಯದಲ್ಲಿ ತನ್ನ ಛಾಪು ಮೂಡಿಸುತ್ತದೆ ಎಂದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವಿರೇಂದ್ರ ಹೆಗ್ಗಡೆ ಮಾತನಾಡಿ, ಕಳೆದ 10 ವರ್ಷಗಳಲ್ಲಿ ಉನ್ನತ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾಗಿದೆ. ನಿರ್ವಹಣೆಯಂತಹ ವಿಷಯಗಳಲ್ಲಿ ವಿದ್ಯಾರ್ಥಿಗಳು ಪಠ್ಯ ಓದುವುದರೊಂದಿಗೆ ಪ್ರಾಯೋಗಿಕ ಜ್ಞಾನ ಪಡೆಯುವುದೂ ಅಷ್ಟೇ ಮುಖ್ಯ ಎಂದು ಅಭಿಪ್ರಾಯಪಟ್ಟರು.




**ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಎಸ್‌ಡಿಎಂಐಎಂಡಿ ಕಾಲೇಜಿನ 26ನೇ ಘಟಿಕೋತ್ಸವ ಸಮಾರಂಭದಲ್ಲಿ ಆರು ಪಿಜಿಡಿಎಂ ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು.**

170ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪಿ.ಜಿ.ಡಿಪ್ಲೊಮಾ ಇನ್ ಮ್ಯಾನೇಜ್‌ಮೆಂಟ್ ಪದವಿ ಪ್ರದಾನ ಮಾಡಲಾಯಿತು. 2019-21ನೇ ಸಾಲಿನ 6 ವಿದ್ಯಾರ್ಥಿಗಳು ಚಿನ್ನದ ಪದಕ ಪಡೆದರು. ಪ್ರೇರಣಾ ಎಂಬ ವಿದ್ಯಾರ್ಥಿನಿ ವ್ಹೀಲ್‌ಚೇರ್‌ನಲ್ಲಿ ಬಂದು ಪದಕ ಸ್ವೀಕರಿಸಿದ್ದು, ವಿಶೇಷವಾಗಿತ್ತು. ಕೊರೊನಾ ಹಿನ್ನೆಲೆಯಲ್ಲಿ ಕಳೆದ ವರ್ಷ ಚಿನ್ನದ ಪದಕಕ್ಕೆ ಭಾಜನರಾಗಿದ್ದ 7 ವಿದ್ಯಾರ್ಥಿಗಳಿಗೂ ವೇದಿಕೆಯ ಮೇಲೆ ಪದಕ ವಿತರಿಸಲಾಯಿತು.

ಕಾಲೇಜಿನ ಶೈಕ್ಷಣಿಕ ವಿಭಾಗದ ಉಪನಿರ್ದೇಶಕರು ಹಾಗೂ ಚೇರ್‌ಮನ್ ಡಾ.ಎಚ್.ಗಾಯತ್ರಿ, ಉದ್ಯಮಿ ಪವನ್ ಜಿ.ರಂಗ, ಡಿ.ಸುರೇಂದ್ರ ಕುಮಾರ್, ಡಾ.ಅನಂತ್ ಕೊಪ್ಪಾರ್, ಡಾ.ಆರ್.ಇಂದಿರಾ, ಡಾ.ಎಸ್.ಎನ್. ಪ್ರಸಾದ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ಚಿನ್ನದ ಪದಕ ಪಡೆದರು**

**ಗೌರವ್ ಮಹೇಶ್ವರಿ**
**ಆರ್.ಅಭಿಷೇಕ್**
**ರಿಷಭ್ ಕುಮಾರ್**
**ಆಯೆಷಾ ನೇಹಲಾ**
**ಅಮನ್ ಕುಮಾರ್**
**ಖುಷ್ಬು ರಾಣಿ**